

# ಛಾಯಾಚಿತ್ರಗಳಲ್ಲಿ ಸ್ವಾಮಿ ವಿವೇಕಾನಂದರು

ಕೆ. ಆರ್. ಮೋಹನ್

### ಛಾಯಾಚಿತ್ರ ೮೨

ಸ್ವಾಮಿ ವಿವೇಕಾನಂದರು ರಿಡ್ಜ್‌ಲಿ ಮ್ಯಾನರ್‌ನಲ್ಲಿ ಇದ್ದಾಗ, ಯುವ ಕಲಾವಿದೆಯಾದ ಮೌಡ್ ಸ್ಟಮ್ ಭೇಟಿ ಮಾಡಲು ಬಂದಿದ್ದಳು. ಒಂದು ಮಧ್ಯಾಹ್ನ ಸ್ಟಮ್ ಮತ್ತು ಇತರರು ಸ್ವಾಮೀಜಿಯವರಿಗೆ, ತಲೆಗೆ ರುಮಾಲು ಕಟ್ಟುವ ವಿಧಾನವನ್ನು ತೋರಿಸಲು ಕೇಳಿಕೊಂಡರು. ಆಗ ಸ್ವಾಮೀಜಿ ಉದ್ದವಾದ ಒಂದು ರೇಶ್ಮೆ ಬಟ್ಟೆಯನ್ನು ತೆಗೆದುಕೊಂಡು, ವಿವಿಧ ರೀತಿಯ ರುಮಾಲುಗಳನ್ನು ತಲೆಗೆ ಕಟ್ಟುವ ಬಗೆಗಳನ್ನು ಪ್ರದರ್ಶಿಸಿದರು. ಸಹರಾ ಮರುಭೂಮಿಯಲ್ಲಿ ಬೆಡುಯಿನ್ ಎಂಬ ಅಲೆಮಾರಿ ಪಂಗಡವಿದೆ. ಅವರು ಒಂದು ವಿಧವಾಗಿ ರುಮಾಲನ್ನು ಕಟ್ಟಿ, ತಮ್ಮ ತಲೆಯನ್ನು ಮತ್ತು ಕತ್ತನ್ನು ಬಿಸಿಲಿನ ಪ್ರಖರತೆಯಿಂದ ರಕ್ಷಿಸಿಕೊಳ್ಳುತ್ತಾರೆ. ಸ್ವಾಮೀಜಿ ಅದನ್ನೂ ಪ್ರದರ್ಶಿಸಿದರು. ಈ ಭಂಗಿಯಲ್ಲಿಯೇ ಸ್ವಲ್ಪ ಸಮಯ ಇರುವಂತೆ ಆ ಯುವ ಕಲಾವಿದೆಯಾದ ಸ್ಟಮ್ ಕೇಳಿಕೊಂಡಳು. ಹಾಗೆ ಅವರು ನಿಂತುಕೊಂಡಿದ್ದಾಗ, ಅವರ ಚಿತ್ರವೊಂದನ್ನು ಬಿಡಿಸಿದಳು. ಅದರ ಛಾಯಾಚಿತ್ರವಿದು. "ಸ್ವಾಮೀಜಿಯವರ ಮುಖ ಬಹಳ ಸರಳ ಮತ್ತು ಸುಂದರವಾಗಿತ್ತು. ಆದರೆ ಅದನ್ನು ಚಿತ್ರದಲ್ಲಿ ಬಿಡಿಸುವುದು ಬಹಳ ಕಷ್ಟ" ಎಂದು ಮೌಡ್ ಸ್ಟಮ್ ಅನಂತರ ಉದ್ಗರಿಸಿದಳು.



ಛಾಯಾಚಿತ್ರ ೮೨



ಛಾಯಾಚಿತ್ರ ೮೩

### ಛಾಯಾಚಿತ್ರ ೮೩

ಮಿಸೆಸ್ ಸಾರಾ ಬುಲ್ ಸ್ವಾಮಿ ವಿವೇಕಾನಂದರಿಗೆ ತಾಯಿಯ ಸ್ಥಾನದಲ್ಲಿದ್ದ ಮಹಿಳೆ. ಅವರು ಸ್ವಾಮೀಜಿಯವರ ಒತ್ತಾಯದ ಮೇರೆಗೆ ರಿಡ್ಜ್‌ಲಿ ಮ್ಯಾನರ್‌ಗೆ ಬಂದು ೧೮೯೯ ರ ಅಕ್ಟೋಬರ್ ೭ ರಿಂದ ನವೆಂಬರ್ ೭ ರವರೆಗೆ ತಂಗಿದ್ದರು. ನಿವಾಸದ ಮೊಗಸಾಲೆಯಲ್ಲಿ ಸಾರಾ ಬುಲ್ ಅವರ ಜೊತೆಗೆ ಸ್ವಾಮೀಜಿ ನಿಂತಿರುವುದನ್ನು ಈ ಚಿತ್ರದಲ್ಲಿ ಕಾಣಬಹುದು. ಸ್ವಾಮೀಜಿಯವರ ದಿವ್ಯ ಸಾನ್ನಿಧ್ಯದಲ್ಲಿ, ಆ ಮನೆಯ ಒಡೆಯರಾದ ಲೆಗೆಟ್ ದಂಪತಿಗಳು, ಅವರ ಪರಿವಾರದವರು, ಸಾರಾ ಬುಲ್ ಮತ್ತಿತರ ಅತಿಥಿಗಳು ಹಲವಾರು ದಿನಗಳನ್ನು ಬಹಳ ಆನಂದದಿಂದ ಕಳೆದರು. ಸ್ವಾಮೀಜಿ ಅಲ್ಲಿ, ತಮಗೆ ಬಹಳ ಅವಶ್ಯವಾಗಿದ್ದ ವಿಶ್ರಾಂತಿಯನ್ನು ಹೊಂದಿದರು. ಅಲ್ಲಿನ ದಿನಗಳು ಅವರಿಗೆ ಬಹಳ ಉಲ್ಲಾಸದಾಯಕವಾಗಿದ್ದವು. ಹೀಗಾಗಿ ಅವರ ಅರೋಗ್ಯ ಬಹಳಷ್ಟು ಸುಧಾರಿಸಿತು. ⌘

ಶಿಕ್ಷಕರೇ, ಗಮನಿಸಿ

# ಶಿಕ್ಷಣದ ಪರಾಕಾಷ್ಠೆ ಅಭಿವೃದ್ಧಿಯ ಮೇಲ್ಮೆ

**ಟಿಪ್ಪುಸುಲ್ತಾನ ಜೆ. ನಾಯ್ಕವಾಡಿ, ಹಾನಗಲ್**

**ಹ**ತ್ತುಹಲವು ಕೋಣೆಗಳು, ಕಲಿಸುವವರು ಮತ್ತು ಕಲಿಯುವವರು, ಕಲಿಸಲು ಅವಶ್ಯಕ ಪರಿಕರಗಳು, ಸಿಬ್ಬಂದಿ ವರ್ಗ – ಹೀಗೆ ಸಣ್ಣದಾದ ಒಂದು ವ್ಯವಸ್ಥೆ. ಶಾಲೆ ಎಂದ ಕೂಡಲೇ ನಮ್ಮ ಸ್ಮೃತಿಪಟಲದಲ್ಲಿ ಹರಿದಾಡುವ ಕಾಲ್ಪನಿಕ ಚಿತ್ರಗಳಿವು! ಇಂದಿನ ಶಿಕ್ಷಣ ಪದ್ಧತಿಯು ಇದೇ ರೀತಿಯದ್ದು. ಆದರೆ ನಾಲ್ಕು ಗೋಡೆಗಳ ಮಧ್ಯೆ ನಡೆಯುವ ವಿದ್ಯಾರ್ಜನೆ ಮಾತ್ರ ಶಿಕ್ಷಣ ಎಂದರೆ ಅದು ಒಂದು ಸಂಕುಚಿತ ಕಲ್ಪನೆ. **ಕಲಿಕೆ ಕೇವಲ ಶಾಲೆಯಲ್ಲಿ ನಡೆಯುವ ಪ್ರಕ್ರಿಯೆಯಲ್ಲ. ಅದು ಜೀವನಪರ್ಯಂತ ನಡೆಯುವ ನಿರಂತರ ಕ್ರಿಯಾಶೀಲ ಚಟುವಟಿಕೆ.** ಪ್ರತಿಯೊಬ್ಬ ವ್ಯಕ್ತಿಯೂ ಜೀವನವೆಂಬ ಪಾಠಶಾಲೆಯಲ್ಲಿ ಸುತ್ತಣ ವಾತಾವರಣದಲ್ಲಿನ ಸಾಮಾಜಿಕ ಸಂಬಂಧಗಳಲ್ಲಿ ಬಂಧಿತನಾಗಿ, ಅನುಭವವೆಂಬ ಉಳಿಪೆಟ್ಟು ತಿಂದು, ಸದಾ ಯಾವುದಾದರೂ ಹೊಸ ಅಂಶಗಳ ಕಲಿಕೆಯಲ್ಲಿ ನಿರತನಾಗಿಯೇ ಇರುತ್ತಾನೆ. ಆದರೆ ಈ ಪ್ರಕ್ರಿಯೆ ನಮ್ಮ ಗ್ರಹಿಕೆಗೆ ಬರುವುದಿಲ್ಲ. ನಮಗೆ ಗೊತ್ತಿಲ್ಲದಂತೆ ನಾವು ಹೊಸ ವಿಷಯಗಳನ್ನು ಕಲಿಯುತ್ತಲೇ ಇರುತ್ತೇವೆ. ಇದು ಒಂದು ಅನೌಪಚಾರಿಕ ಶಿಕ್ಷಣದ ಮಾರ್ಗವೂ ಹೌದು. ಆದರೆ ಆಧುನಿಕ ಯುಗದಲ್ಲಿ ಔಪಚಾರಿಕ ಶಿಕ್ಷಣವೇ ಹೆಚ್ಚು ಔಚಿತ್ಯಪೂರ್ಣ ಎನಿಸಿಬಿಟ್ಟಿದೆ. ಹೀಗಾಗಿ ಶಾಲಾಕಾಲೇಜುಗಳು ಹೆಚ್ಚು ಪ್ರಚಲಿತಕ್ಕೆ ಬಂದಿವೆ. ಆದರೆ ಕಲಿಕೆಯು, ಅದು ಔಪಚಾರಿಕವಿರಲಿ, ಅನೌಪಚಾರಿಕವಿರಲಿ – ಯಾವ ರೂಪದ್ದಾದರೂ – ವ್ಯಕ್ತಿಯೊಬ್ಬನ ವ್ಯಕ್ತಿತ್ವವನ್ನು ರೂಪಿಸುವುದರಲ್ಲಿ ಮಹತ್ತರವಾದ ಪಾತ್ರವನ್ನು ವಹಿಸುತ್ತದೆ.

**"ಮಗು ಮತ್ತು ವ್ಯಕ್ತಿಯಲ್ಲಿರುವ ಶಾರೀರಿಕ, ಮಾನಸಿಕ ಹಾಗೂ ಆಧ್ಯಾತ್ಮಿಕ ಶಕ್ತಿಗಳನ್ನು ಸರ್ವತೋಮುಖವಾಗಿ ವಿಕಸಿಸುವಂತೆ ಮಾಡುವುದೇ ಶಿಕ್ಷಣ."** – ಶಿಕ್ಷಣವನ್ನು ಕುರಿತು ಗಾಂಧೀಜಿಯವರು ನೀಡಿದ ವ್ಯಾಖ್ಯಾನವಿದು. ಈ ವ್ಯಾಖ್ಯಾನವನ್ನು ವಿಶ್ಲೇಷಣೆ ಮಾಡಿದಾಗ ಮಗುವಿನ ಸರ್ವತೋಮುಖ ಬೆಳವಣಿಗೆಯೇ ಶಿಕ್ಷಣ ಎಂದಾಗುತ್ತದೆ. ಶಿಕ್ಷಣ ಕೇವಲ ಒಬ್ಬ ಮಗುವಿನ ಸರ್ವತೋಮುಖ ಬೆಳವಣಿಗೆ ಮಾಡುವುದಿಲ್ಲ, ಅದರ ಜೊತೆಜೊತೆಗೆ ದೇಶದ ಸರ್ವತೋಮುಖ ಅಭಿವೃದ್ಧಿಯನ್ನೂ ಮಾಡುತ್ತದೆ. ದೇಶದ ನಿಜವಾದ ಸಂಪತ್ತು ಮಾನವಸಂಪನ್ಮೂಲದಲ್ಲಿದೆ. ಮಾನವಸಂಪನ್ಮೂಲದ ಅಭಿವೃದ್ಧಿಯಾದರೆ ದೇಶದ ಅಭಿವೃದ್ಧಿಯಾದ ಹಾಗೆಯೇ. ಭಾರತದಲ್ಲಿ ಅಗಾಧವಾದ ಮಾನವಸಂಪನ್ಮೂಲವಿದೆ. ಆದರೆ ಅದು ಸರಿಯಾದ ರೀತಿಯಲ್ಲಿ ಬಳಕೆಯಾಗುತ್ತಿಲ್ಲ. ಚೀನಾ ದೇಶ ಜಗತ್ತಿನಲ್ಲಿಯೇ ಅತೀ ಹೆಚ್ಚು ಜನಸಂಖ್ಯೆಯನ್ನು ಹೊಂದಿರುವ ರಾಷ್ಟ್ರ. ವಿಶೇಷವೆಂದರೆ ಇಂತಹ ಗಜಗಾತ್ರದ ಜನಸಂಖ್ಯೆ ಆ ದೇಶಕ್ಕೆ ಯಾವತ್ತೂ ಹೊರೆಯಾಗಿ ಪರಿಣಮಿಸಿಲ್ಲ. ಏಕೆಂದರೆ ಅಲ್ಲಿ ಮಾನವಸಂಪನ್ಮೂಲದ ಸದ್ಬಳಕೆಯಾಗಿದೆ. "ಹುಟ್ಟಿದ ಕೂಸುಗಳೊಂದಿಗೆ, ದುಡಿಯುವ ಎರಡು ಕೈಗಳೂ ಹುಟ್ಟಿಕೊಳ್ಳುತ್ತವೆ" ಎಂಬ ಸತ್ಯಾಂಶವನ್ನು ಚೀನೀದೇಶೀಯರು ಚೆನ್ನಾಗಿ ಅರ್ಥ ಮಾಡಿಕೊಂಡಿದ್ದಾರೆ ಎಂದೆನಿಸುತ್ತದೆ.

ಅಂಕಿ–ಅಂಶಗಳತ್ತ ಗಮನಹರಿಸಿದಾಗ, ಭಾರತ ಸರ್ಕಾರವು ತನ್ನ ರಾಷ್ಟ್ರೀಯ ಉತ್ಪನ್ನದ ಶೇ. ೩ . ೫ ರಷ್ಟು ಮಾತ್ರವೇ ಶಿಕ್ಷಣಕ್ಕೆ ವ್ಯಯ ಮಾಡುತ್ತಿದೆ ಎನ್ನುವುದು ಕಂಡುಬರುತ್ತದೆ. ಅಮೇರಿಕೆಯಲ್ಲಿ ಅದರ ಪ್ರಮಾಣ ಶೇ. ೧೫ ರಷ್ಟಿದೆ. ಅಂದರೆ ಅಲ್ಲಿನ ಸರ್ಕಾರ ಖರ್ಚು ಮಾಡುವ ವೆಚ್ಚ ಭಾರತಕ್ಕಿಂತ ಐದು ಪಟ್ಟು ಹೆಚ್ಚು. ಇಲ್ಲಿ ಗಮನಿಸಬೇಕಾದ ಇನ್ನೊಂದು ಅಂಶವೆಂದರೆ ಜಗತ್ತಿನ ಅಭಿವೃದ್ಧಿ ಹೊಂದಿದ ರಾಷ್ಟ್ರಗಳು ಶಿಕ್ಷಣಕ್ಕೆ ಹೆಚ್ಚಿನ ಮಹತ್ವ ನೀಡಿವೆ ಎನ್ನುವುದು. ಒಂದು ದೇಶದ ಅಭಿವೃದ್ಧಿ ಶೈಕ್ಷಣಿಕ ಪ್ರಗತಿಯಿಂದ ಮಾತ್ರ ಸಾಧ್ಯ ಎಂಬ ಅಂಶವನ್ನು ಮುಂದುವರೆದ ರಾಷ್ಟ್ರಗಳು ಮನಗಂಡಿವೆ. ಹಿಂದುಳಿದ ದೇಶಗಳೂ ಈ ಅಂಶದ ಕಡೆಗೆ ಗಮನಹರಿಸಬೇಕಾಗಿದೆ. ಭಾರತದ ಆರ್ಥಿಕಾಭಿವೃದ್ಧಿಯಲ್ಲಿ ಎಷ್ಟೋ ಪಂಚವಾರ್ಷಿಕ ಯೋಜನೆಗಳು ಕಳೆದು ಹೋಗಿವೆ. ಅದರಲ್ಲಿ ಶಿಕ್ಷಣಕ್ಕಾಗಿ ವೆಚ್ಚ ಮಾಡುವ ಪ್ರಮಾಣ ಅತ್ಯಂತ ಅಲ್ಪ ಪ್ರಮಾಣದ್ದು. ಒಂದು ವೇಳೆ ಭಾರತ ಸರ್ಕಾರ ತನ್ನ ಪ್ರಥಮ ಪಂಚವಾರ್ಷಿಕ ಯೋಜನೆಯಿಂದಲೇ ಶಿಕ್ಷಣಕ್ಕೆ ಹೆಚ್ಚಿನ ಮಹತ್ವ ನಿಡುತ್ತ ಬಂದಿದ್ದರೆ, ಇವತ್ತು ಭಾರತದ ಒಟ್ಟಾರೆ ಪ್ರಗತಿ ಇನ್ನೂ ಉತ್ತಮಮಟ್ಟದ್ದಾಗಿರುತ್ತಿತ್ತು ಎನ್ನುವುದರಲ್ಲಿ ಯಾವ ಸಂದೇಹವೂ ಇಲ್ಲ.

ಒಂದು ದೇಶದ ಅಭಿವೃದ್ಧಿ ಅದರ ರಾಜಕೀಯ ವಾತಾವರಣವನ್ನೂ ಅವಲಂಬಿಸಿರುತ್ತದೆ. ಸ್ವಾರ್ಥಕ್ಕೆ ಬಲಿಯಾಗಿ ಜಡ್ಡುಗಟ್ಟಿರುವ ನಮ್ಮ ರಾಜಕೀಯ ವ್ಯವಸ್ಥೆಯ ಬೇರುಗಳು ಭದ್ರವಾಗಿ ನೆಲೆಯೂರಲು ಅವಕಾಶ ಮಾಡಿಕೊಡುತ್ತಿರುವುದು ಯಾವುದು? ನಮ್ಮ ದೇಶದ ಮುಗ್ಧ ಅನಕ್ಷರಸ್ಥರ ಮತಗಳು. ಬಹುತೇಕ ಅನಕ್ಷರಸ್ಥರು ಹಣ, ಮದ್ಯ ಮುಂತಾದ ಆಮಿಷಗಳಿಗೆ ಬಲಿಯಾಗಿ ತಮ್ಮ ಮತಗಳನ್ನು ಮಾರಿಕೊಳ್ಳುವ ಕೆಟ್ಟ ಸಂಪ್ರದಾಯ ಹೊಸದೇನಲ್ಲ. ಹೀಗೆ ಸಮಸ್ಯೆಯ ಪದರಗಳನ್ನು ಬಿಡಿಸುತ್ತ ಹೋದರೆ ಇಂಥ ಅನೇಕ ಅಂಶಗಳು ನಮ್ಮ ಎಡತಾಕುತ್ತವೆ. ಸಮಸ್ಯೆಯ ಮೂಲನೆಲೆಯನ್ನು ಹುಡುಕುತ್ತಾ ಹೋದಂತೆ, ಮಾನವನ